# ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆ

## ದೂರು ಸಮಿತಿಯ ರಚನೆ ಕಡ್ಡಾಯ

### ಓದಿ ತಿಳಿಯಿರಿ



**ಸುರಕ್ಷಿತ ಕೆಲಸದ ಪರಿಸರ ಪ್ರತಿಯೊಬ್ಬ ಉದ್ಯೋಗಸ್ಥ ಮಹಿಳೆಯ ಹಕ್ಕು**

**ಅಂಥ ಪರಿಸರ ನಿರ್ಮಾಣದ ಜವಾಬ್ದಾರಿ ಉದ್ಯೋಗದಾತರದ್ದು ಹಾಗೂ ಸಂಸ್ಥೆಗಳ ಮಾಲೀಕರದ್ದು**

**ಸ್ತ್ರೀ ಪುರುಷ ಸಮಾನತೆ, ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯ ಇವು ಮೂಲಭೂತ ಹಕ್ಕುಗಳು**

## ಲೈಂಗಿಕ ಕಿರುಕುಳ ಎಂದರೆ

- ದೈಹಿಕ ಸ್ಪರ್ಶ ಮತ್ತು ಲೈಂಗಿಕ ಅಭಿನಯ ಅಥವಾ ಮಾತು
- ಲೈಂಗಿಕ ತೃಪ್ತಿ ನೀಡುವಂತೆ ಬೇಡಿಕೆ ಅಥವಾ ಒತ್ತಾಯ
- ಲೈಂಗಿಕವೆನಿಸಬಹುದಾದಂಥ ಅಭಿಪ್ರಾಯಗಳ ಅಭಿವ್ಯಕ್ತಿ
- ಅಶ್ಲೀಲ ಸಾಹಿತ್ಯ ಅಥವಾ ಚಿತ್ರಗಳನ್ನು ತೋರಿಸುವುದು



- ಲೈಂಗಿಕ ಸ್ವರೂಪದ ಇತರ ಯಾವುದೇ ಅನುಚಿತ ಆಂಗಿಕ, ಶಾಬ್ದಿಕ ಅಥವಾ ಶಾಬ್ದಿಕವಲ್ಲದ ವರ್ತನೆ

## ಲೈಂಗಿಕ ಕಿರುಕುಳದ ಉದಾಹರಣೆಗಳು

- ಉದ್ಯೋಗದಲ್ಲಿ ಬಡ್ತಿ ಬೇಕಾದಲ್ಲಿ ತನ್ನನ್ನು ಮೆಚ್ಚಿಸಬೇಕೆಂದು ಸೂಚನೆ ಕೊಡುವುದು
- ಕೆಲಸ ಮಾಡುವಾಗ ಸೂಚನೆ ಕೊಡುವ ನೆವದಲ್ಲಿ ಬೇಕೆಂದೇ ಮೈಕೈ ಸ್ಪರ್ಶಿಸುವುದು
- ಮಾತನಾಡುವಾಗ ಅಸಭ್ಯ ಸಂಜ್ಞೆಗಳನ್ನು ಮಾಡುವುದು
- ಅಶ್ಲೀಲ ಹಾಸ್ಯಚಟಾಕಿಗಳನ್ನು ಹಾರಿಸುವುದರ ಮೂಲಕ ಇತರರೆದುರಿಗೆ ಸಂಕೋಚಪಡುವಂತೆ ಮಾಡುವುದು



- ತನ್ನ ಲೈಂಗಿಕ ಆಸೆಗಳನ್ನು ಪೂರೈಸದಿದ್ದರೆ ವರ್ಗಾವಣೆ ಮಾಡುವುದಾಗಿ ಅಥವಾ ಕೆಲಸದಿಂದ ತೆಗೆಯುವುದಾಗಿ ಹೆದರಿಸುವುದು
- ಕೆಲಸ ಆಗಬೇಕಾದರೆ ತನ್ನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಸಲಹೆ ನೀಡುವುದು

## ದೂರು ಸಮಿತಿ ರಚನೆ - ಮಹಿಳೆಯರ ರಕ್ಷಣೆಗೆ

**ಸರ್ವೋಚ್ಚ ನ್ಯಾಯಾಲಯದ ಆದೇಶ :**

ಪ್ರತಿಯೊಂದು ಸರ್ಕಾರಿ ಅಥವಾ ಖಾಸಗಿ ಕಛೇರಿಯಲ್ಲಿಯೂ ದೂರು ಸಮಿತಿಯ ರಚನೆ ಕಡ್ಡಾಯ



- ಇದಕ್ಕೆ ಮಹಿಳೆಯೇ ಅಧ್ಯಕ್ಷಳಾಗಿರಬೇಕು
- ಅರ್ಧದಷ್ಟು ಸದಸ್ಯರು ಮಹಿಳೆಯರಾಗಿರಬೇಕು
- ಈ ವಿಷಯದ ಬಗ್ಗೆ ಅರಿವಿರುವ ಸರ್ಕಾರೇತರ ಸಂಘ ಅಥವಾ ಸಂಸ್ಥೆಯ ಒಬ್ಬ ಸದಸ್ಯರು ಇರಬೇಕು

**ಲೈಂಗಿಕ ಕಿರುಕುಳಕ್ಕೆ ಒಳಗಾದಲ್ಲಿ ಕೂಡಲೇ ದೂರು ಸಮಿತಿಗೆ ದೂರು ನೀಡಿ**

**ಸಹಿಸಬೇಡಿ**

ಲೈಂಗಿಕ ಕಿರುಕುಳವನ್ನು ಮೌನವಾಗಿ ಸಹಿಸುವ ಅಗತ್ಯವಿಲ್ಲ- ನಿರ್ಲಕ್ಷ್ಯ ಇದಕ್ಕೆ ಮದ್ದಲ್ಲ- ಸಹಿಸಿದಷ್ಟೂ ಹೆಚ್ಚಾಗುವ ಉಪದ್ರವ ಇದು - ಮನಸ್ಸಿನ ನೆಮ್ಮದಿ ಹಾಳಾದರೆ ಆರೋಗ್ಯವೂ ಹಾಳು

## ವಿಚಾರಣೆಯ ರೀತಿ

- ವಿಚಾರಣೆ ಅನೌಪಚಾರಿಕವಾಗಿರಬೇಕು
- ದೂರು ನೀಡಿದವರನ್ನು ಗೌರವದಿಂದ ನಡೆಸಿಕೊಳ್ಳಬೇಕು
- ಕಿರುಕುಳದ ಬಗ್ಗೆ ಪ್ರತ್ಯಕ್ಷ ಸಾಕ್ಷಿಯನ್ನೊದಗಿಸುವಂತೆ ಒತ್ತಾಯಿಸಬಾರದು - ಏಕೆಂದರೆ ಇಂಥ ಘಟನೆಗಳೆಲ್ಲ ನಡೆಯುವುದು ಯಾರೂ ಇಲ್ಲದಾಗಲೇ
- ದೂರು ನೀಡಿದವರಿಗೆ ಮಾತನಾಡಲು ಮೊದಲು ಅವಕಾಶ ಕೊಡಬೇಕು
- ಇಲ್ಲಿ ಅವರ ಆರೋಪವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವ ಅಗತ್ಯವಿಲ್ಲ
- ಇಡೀ ವಿಚಾರಣೆಯ ಪ್ರಕ್ರಿಯೆ ಮಾನವೀಯತೆಯಿಂದ ಕೂಡಿರಬೇಕು



**ವಿಚಾರಣೆಗೆ ಮುಂಚೆಯೇ ಕಿರುಕುಳ ನೀಡಿದವನನ್ನು ಅಥವಾ ತನ್ನನ್ನು ವರ್ಗಾಯಿಸುವಂತೆ ಕೇಳುವ ಹಕ್ಕು ದೂರು ನೀಡಿದ ಮಹಿಳೆಗಿದೆ**

## ದೂರು ಸಮಿತಿಯ ಜವಾಬ್ದಾರಿ

- ತಾನು ಸ್ವೀಕರಿಸಿದ ದೂರುಗಳ ಸಂಬಂಧದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಪ್ರತಿ ವರ್ಷ ಸರ್ಕಾರಕ್ಕೆ ವರದಿ ಸಲ್ಲಿಸಬೇಕು

ದೂರು ಸಮಿತಿ ನಡೆಸಿದ ವಿಚಾರಣೆ **ಅಂತಿಮ.** ದೂರು ಸಮಿತಿಯ ವರದಿಯ ಆಧಾರದ ಮೇಲೆ ಶಿಸ್ತು ಪ್ರಾಧಿಕಾರ ನಿಯಮಗಳನುಸಾರ ಕ್ರಮ ಕೈಗೊಳ್ಳುತ್ತದೆ.

## ಉದ್ಯೋಗದಾತ ಅಥವಾ ಸಂಸ್ಥೆಯ ಮಾಲೀಕನ ಜವಾಬ್ದಾರಿ



- ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳವನ್ನು ನಿಷೇಧಿಸಲಾಗಿದೆ ಎಂಬ ಬಗ್ಗೆ ಪ್ರಕಟಣೆ ಹೊರಡಿಸಬೇಕು - ಸುತ್ತೋಲೆಯ ಮೂಲಕ ತಿಳಿಸಬೇಕು

- ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ನಿಯಮಗಳಲ್ಲಿ ಲೈಂಗಿಕ ಕಿರುಕುಳವನ್ನು ನಿಷೇಧಿಸುವ ಮತ್ತು ಅಂಥ ಅಪರಾಧಕ್ಕೆ ಸೂಕ್ತ ದಂಡ ವಿಧಿಸುವ ನಿಯಮಗಳನ್ನು ಸೇರಿಸಬೇಕು

- ಮಹಿಳಾ ಉದ್ಯೋಗಿಗಳಿಗೆ ಕೆಲಸದ ಸ್ಥಳದಲ್ಲಿ ಸುರಕ್ಷಿತವಾದ, ಆರೋಗ್ಯಕರ, ಸ್ವಚ್ಛ ಹಾಗೂ ಮುಕ್ತ ವಾತಾವರಣವನ್ನು ಕಲ್ಪಿಸಬೇಕು



- ಲೈಂಗಿಕ ಕಿರುಕುಳದ ಬಗ್ಗೆ ವಿಚಾರಣೆ ನಡೆಸುವಾಗ ದೂರು ನೀಡಿದವರಿಗೆ ಹಾಗೂ ಸಾಕ್ಷಿಗಳಿಗೆ ತೊಂದರೆ ಕೊಡದಂತೆ ಹಾಗೂ ತಾರತಮ್ಯವಾಗದಂತೆ ನೋಡಿಕೊಳ್ಳಬೇಕು. ಸಂಸ್ಥೆಯ ಉದ್ಯೋಗಿಗಳಲ್ಲದ ಹೊರಗಿನ ವ್ಯಕ್ತಿಗಳಿಂದಾಗುವ ಲೈಂಗಿಕ ಕಿರುಕುಳದಿಂದಲೂ ಮಹಿಳಾ ಉದ್ಯೋಗಿಗಳಿಗೆ ರಕ್ಷಣೆ ಕೊಡಬೇಕು



ಉದ್ಯೋಗಿಯ ವರ್ತನೆ ಯಾವುದೇ ಕಾನೂನಿನ ಅಡಿಯಲ್ಲಿ ಅಪರಾಧವೆನಿಸಿದರೆ ಅಂಥ ವ್ಯಕ್ತಿಯ ವಿರುದ್ಧ ಸಂಸ್ಥೆಯ ಮಾಲೀಕ ಕೂಡಲೇ ಪೊಲೀಸರಿಗೆ ದೂರು ನೀಡಬೇಕು.

## ಸರ್ವೋಚ್ಚ ನ್ಯಾಯಾಲಯದ ಈ ಮಾರ್ಗದರ್ಶಿ ಸೂತ್ರಗಳು

- ಎಲ್ಲ ಸರ್ಕಾರಿ ಸಂಸ್ಥೆಗಳಿಗೆ
- ಎಲ್ಲ ಖಾಸಗಿ ಸಂಸ್ಥೆಗಳಿಗೆ
- ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುತ್ತವೆ

**ಲೈಂಗಿಕ ಕಿರುಕುಳದ ಪ್ರಕರಣಗಳಲ್ಲಿ ದೂರು ಸಮಿತಿಯೇ ವಿಚಾರಣಾ ಪ್ರಾಧಿಕಾರ**

## ಪ್ರತಿ ಇಲಾಖೆ ಹಾಗೂ ಸಂಸ್ಥೆ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕು



- ಸಿಬ್ಬಂದಿ ಹಾಗೂ ನೌಕರರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು
- ಎಲ್ಲ ಅಧಿಕಾರಿಗಳು ಹಾಗೂ ಪುರುಷ ಸಿಬ್ಬಂದಿ ಈ ಸಮಸ್ಯೆಗೆ ಹೆಚ್ಚು ಸಂವೇದನಾಶೀಲರಾಗಿರುವಂತೆ ಸೂಚಿಸಬೇಕು
- ದೂರು ಸಮಿತಿಯ ಸದಸ್ಯರಿಗೆ ವಿಚಾರಣಾ ಪ್ರಕ್ರಿಯೆಯ ಬಗ್ಗೆ ಕ್ಷಿಪ್ರ ತರಬೇತಿ ನೀಡಬೇಕು

**ಆಡಳಿತಾತ್ಮಕ ಸಂಕಲ್ಪದಿಂದ ಮಾತ್ರವೇ ಈ ಪಿಡುಗನ್ನು ನಿವಾರಿಸಲು ಸಾಧ್ಯ**